# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಶರವಣ ಟಿ.ಎ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **930** |
| ಉತ್ತರಿಸಬೇಕಾದ ದಿನಾಂಕ | : | 21.09.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರದ ವಿವಿಧ ವಸತಿ ಯೋಜನೆಯಡಿಯಲ್ಲಿ ವಸತಿ ಹಂಚಿಕೆಗಾಗಿ ಜನ ದಾಖಲೆ ಪತ್ರಗಳಿಗಾಗಿ ವಿವಿಧ ಇಲಾಖೆ, ಕಛೇರಿ, ಬ್ಯಾಂಕ್‌ಗಳಿಗೆ ಅಲೆದಾಡುತ್ತಿದ್ದು, ಕಂದಾಯ, ವಸತಿ ಇಲಾಖೆಯ ನಡುವಿನ ಈ ಗೊಂದಲದ ಪರಿಹಾರಕ್ಕಾಗಿ ಸಮನ್ವಯ ಇಲ್ಲವೇ; ಏಕಗಾವಕ್ಷಿ ಕೇಂದ್ರ ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; | ಸರ್ಕಾರದ ವಿವಿಧ ವಸತಿ ಯೋಜನೆಗಳಡಿ ಅರ್ಹ ಕುಟುಂಬಗಳು ವಸತಿ ಸೌಲಭ್ಯವನ್ನು ಪಡೆಯಲು ಕೆಳಕಂಡ ದಾಖಲೆಗಳನ್ನು ಹೊಂದಿರಬೇಕಾಗಿರುತ್ತದೆ.<br><br>1. ಆಧಾರ್ ಸಂಖ್ಯೆ.<br>2. ಕುಟುಂಬ ಪಡಿತರ ಚೀಟಿ ಸಂಖ್ಯೆ.<br>3. ಜಾತಿ ಪ್ರಮಾಣದ ಆರ್.ಡಿ ಸಂಖ್ಯೆ(ಪರಿಶಿಷ್ಟ ಜಾತಿ/ಪಂಗಡ & ಅಲ್ಪ ಸಂಖ್ಯಾತ ವರ್ಗದವರಿಗೆ)<br>4. ಆದಾಯ ಪ್ರಮಾಣ ಪತ್ರದ ಆರ್.ಡಿ ಸಂಖ್ಯೆ.<br>5. ವಾಸ ಸ್ಥಳ ದೃಡೀಕರಣ ಆರ್.ಡಿ ಸಂಖ್ಯೆ (ಮುಖ್ಯ ಮಂತ್ರಿಗಳ 1 ಲಕ್ಷ ವಸತಿ ಯೋಜನೆ(ಬೆಂಗಳೂರು ಮಾತ್ರ)<br><br>ಈ ಮೇಲ್ಕಂಡ ಎಲ್ಲಾ ದಾಖಲೆಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ Real Time basis ಮೇರೆಗೆ web service ಮೂಲಕ ಪಡೆಯಲಾಗುತ್ತದೆ. ಅರ್ಹ ಫಲಾನುಭವಿಗಳು ಮೇಲ್ಕಂಡ ದಾಖಲೆಗಳ ಸಂಖ್ಯೆಗಳನ್ನು ನೀಡಿದರೆ ಸಾಕು, ಭೌತಿಕ ದಾಖಲೆಗಳ ಪ್ರತಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.<br><br>ನಿವೇಶನಕ್ಕೆ ಸಂಬಂಧಿಸಿದಂತೆ, ಫಲಾನುಭವಿಯು ಹಕ್ಕು ಪತ್ರ/ಕ್ರಯಪತ್ರ/ದಾನಪತ್ರ/ಉಡುಗೊರೆ ಪತ್ರ/ಖಾತಾ ಪತ್ರಗಳನ್ನು ಭೌತಿಕವಾಗಿ ಗ್ರಾಮ ಪಂಚಾಯ್ತಿ/ನಗರ ಸ್ಥಳೀಯ ಸಂಸ್ಥೆಗಳಿಗೆ ಸಲ್ಲಿಸಬೇಕಾಗಿದ್ದು, ಯಾವುದೇ ಸಮಸ್ಯೆಗಳಿರುವುದಿಲ್ಲ.<br><br><u>ಬ್ಯಾಂಕ್ ಮೂಲಕ ಸಾಲ:</u><br><br>ವಿವಿಧ ವಸತಿ ಯೋಜನೆಗಳಡಿ ಫಲಾನುಭವಿಗಳೇ ಸ್ವತ: ಮನೆ (BLC) ನಿರ್ಮಿಸಿಕೊಳ್ಳುವ ಸಂಧರ್ಭಗಳಲ್ಲಿ ಸರ್ಕಾರದ ಸಹಾಯಧನ ಹೊರತುಪಡಿಸಿ ಸಾಲದ ಅವಶ್ಯವಿದ್ದಲ್ಲಿ ಫಲಾನುಭವಿಗಳೇ ನೇರವಾಗಿ ಅಗತ್ಯ ದಾಖಲೆಗಳನ್ನು ಒದಗಿಸಿ ಆಯಾ ಸ್ಥಳೀಯ ಬ್ಯಾಂಕ್ ಮೂಲಕ ಸಾಲ ಪಡೆಯಬಹುದು.<br><br>ಪ್ರಧಾನ ಮಂತ್ರಿ ಆವಾಸ್ ಯೋಜನೆ(ನಗರ) ಅಭಿಯಾನದ AHP ಘಟಕದಡಿ ಅನುಷ್ಠಾನ ಸಂಸ್ಥೆಗಳು ವಿವಿಧ ನಗರಗಳಲ್ಲಿ ಕೇಂದ್ರ, ರಾಜ್ಯ ವಸತಿ ಯೋಜನೆಗಳ ಸಮನ್ವಯದೊಂದಿಗೆ |

| | | |
|---|---|---|
| | | ಹಾಗೂ ಫಲಾನುಭವಿಗಳ ವಂತಿಕೆ ಮೊತ್ತವನ್ನು ಕ್ರೋಢೀಕರಿಸಿ ಬಹುಮಹಡಿ/ ನೆಲಮಹಡಿ ಮಾದರಿಯಲ್ಲಿ ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡುತ್ತಿವೆ. ಅಂತಹ ಯೋಜನೆಗಳಡಿ ಫಲಾನುಭವಿಯು ತನ್ನ ಪಾಲಿನ ವಂತಿಕೆಯ ಮೊತ್ತವನ್ನು ಸ್ವಂತ ಉಳಿತಾಯ/ ಬ್ಯಾಂಕ್ ಸಾಲದ ಮೂಲಕ ಭರಿಸಬಹುದಾಗಿದೆ.<br><br>ರಾಜ್ಯ ಸರ್ಕಾರವು ಬ್ಯಾಂಕ್ ಸಾಲ ಸೌಲಭ್ಯದ ಪ್ರಕ್ರಿಯೆಯನ್ನು ಸರಳೀಕರಿಸಲು ಮಾರ್ಗಸೂಚಿಗಳನ್ನು ಹೊರಡಿಸಿದೆ. ಏಕರೂಪ ಸರಳೀಕೃತ ಅರ್ಜಿ ನಮೂನೆಗಳು, ದಾಖಲೆಗಳು, ಹಂಚಿಕಾತಿ ಪತ್ರ, ಟ್ರೈ ಪಾರ್ಟಿ ಅಗ್ರಿಮೆಂಟ್ ಗಳನ್ನು ರೂಪಿಸಲಾಗಿದೆ. ವ್ಯಾಲ್ಯುವರ್/ ಲೀಗಲ್ ಅಡ್ವೈಸರ್ ಗಳನ್ನುನೇಮಕ ಮಾಡಿಕೊಂಡಿದೆ. ಬ್ಯಾಂಕ್‌ಗಳ ಕೋರಿಕೆ ಮೇರೆಗೆ ಅನೇಕ ನಿಬಂಧನೆಗಳನ್ನು ಸಡಿಲಿಸಲಾಗಿದೆ. |
| ಆ) | ಸ್ಥಳೀಯ ಯೋಜನೆ ಪ್ರದೇಶದ ಹೊರಗೆ ಭೂಪರಿವರ್ತನೆ ಜಮೀನಿನಲ್ಲಿ ವಸತಿ ಬಡಾವಣೆ ನಿರ್ಮಿಸಲು ಏಕ ವಿನ್ಯಾಸ ಅನುಮೋದನೆ ನೀಡುವ ಅಧಿಕಾರ ನಗರ ಗ್ರಾಮಾಂತರ ಯೋಜನೆ ಇಲಾಖೆಗೆ ನೀಡಲಾಗಿದ್ದು, ಇದರಿಂದಾಗಿ ವಸತಿ ಯೋಜನೆ ವಿಳಂಬ ಆಗುತ್ತಿದ್ದು, ಈ ಅನುಮೋದನೆ ಅಧಿಕಾರವನ್ನು ಈ ಮೊದಲು ಇದ್ದಂತೆಯೇ ಗ್ರಾಮ ಮತ್ತು ತಾಲ್ಲೂಕು ಪಂಚಾಯಿತಿಗೆ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ? | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಪಡೆದ ಮಾಹಿತಿಯಂತೆ. ಸರ್ಕಾರದ ಪತ್ರ ಸಂಖ್ಯೆ.ಆರ್.ಡಿ.ಪಿ.ಆರ್ 10 ಜಿ.ಪಿ.ಎ 2021, ದಿನಾಂಕ:28.02.2022 ರಲ್ಲಿ ಗ್ರಾಮ ಪಂಚಾಯತಿಗಳು ಸ್ಥಳೀಯ ಯೋಜನಾ ಪ್ರದೇಶದ ಹೊರಭಾಗದಲ್ಲಿನ ಒಂದು ಏಕರೆಗಿಂತ ಕಡಿಮೆ ಭೂ ಪರಿವರ್ತಿತ ಜಮೀನುಗಳಲ್ಲಿನ ವಿನ್ಯಾಸ ಅನುಮೋದನೆಗಾಗಿ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಅನುಮೋದನೆ ಪಡೆದು ಕ್ರಮ ವಹಿಸುವಂತೆ ತಿಳಿಸಲಾಗಿತ್ತು. ಆದರೆ, ಪ್ರಸ್ತುತ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 ರ ಪ್ರಕರಣ 4 (ಕೆ) ಗೆ ಸಂಬಂಧಿಸಿದಂತೆ ಇದುವರೆಗೂ ನಿಯಮಗಳನ್ನು ರಚಿಸದೇ ಇರುವುದರಿಂದ ನಿಯಮಗಳನ್ನು ರಚಿಸುವ ವರೆಗೆ ದಿನಾಂಕ 28.02.2022 ರ ಪತ್ರವನ್ನು ಹಿಂಪಡೆಯಲಾಗಿದೆ.<br><br>ದಿನಾಂಕ:11.11.2014 ರ ಸರ್ಕಾರದ ಪತ್ರ ಮತ್ತು ದಿನಾಂಕ 19.03.2015 ರ ಸುತ್ತೋಲೆಯಂತೆ ಸ್ಥಳೀಯ ಯೋಜನಾ ಪ್ರದೇಶದ ಹೊರಗಡೆ ಭೂ ಪರಿವರ್ತಿತ ಜಮೀನುಗಳಲ್ಲಿ ಬಿಡಾವಣೆಗಾಗಿ ವಿನ್ಯಾಸ ಅನುಮೋದನೆ ಮಾಡಲು ಅನುಸರಿಸಬೇಕಾದ ವಿಧಾನಗಳ ಬಗ್ಗೆ ಕೈಪಿಡಿ ಮತ್ತು ಸುತ್ತೋಲೆಯಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ಅದರಂತೆ ತಾಲ್ಲೂಕು ಪಂಚಾಯತಿಗಳು ಮತ್ತು ಗ್ರಾಮ ಪಂಚಾಯತಿಗಳು ಕ್ರಮ ವಹಿಸುವಂತೆ ಸರ್ಕಾರದ ಪತ್ರ ಸಂಖ್ಯೆ. ಆರ್. ಡಿ. ಪಿ. ಆರ್ 10 ಜಿ ಪಿ. ಎ 2021, ದಿನಾಂಕ 28.06.2022 ರಲ್ಲಿ ತಿಳಿಸಲಾಗಿದೆ. |

ಸಂಖ್ಯೆ :ವಇ 413 ಹೆಚ್‌ಎಎಂ 2022

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು